



ಅರುಣ ಪಿ. ಭಟ್ಟ

## ವಾರಭವಿಷ್ಯ: 28.09.2023ರಿಂದ 04.10.2023ರವರೆಗೆ



**ಮೇಷ**

ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧಮಾಡಿಕೊಳ್ಳುವುದಕ್ಕೆ ವಾರದ ಶುರುವಿನಲ್ಲಿ ಸಿದ್ಧರಾಗುತ್ತೀರಿ. ಆದರೆ ಕೆಲವು ವಿಚಾರಗಳು ಕಣ್ತಪ್ಪಿನಿಂದ ಬಿಟ್ಟು ಹೋಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ವೈಯಕ್ತಿಕ ಸಂಬಂಧಗಳು ಉತ್ತಮವಾಗಿರುತ್ತದೆ. ಶುಭದಿನ 29. ಶ್ರೀ ದುರ್ಗಾಪಾರಾಯಣ ಮಾಡಿರಿ

---



**ವೃಷಭ**

ವಾರದ ಶುರುವಿನಲ್ಲಿ ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳ ಪರಾಮರ್ಶೆಗೆ ಹೆಚ್ಚು ಸಮಯ ಮೀಸಲಿಡಲಿದ್ದೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಆಹಾರ ನೀರಿನ ಸೇವನೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಉದ್ಯೋಗ ಸ್ಥಳದಲ್ಲಿ ಒತ್ತಡದ ಸನ್ನಿವೇಶ ಎದುರಾಗಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ದೈಹಿಕ ಕ್ಷಮತೆ ಉತ್ತಮವಾಗಿರುತ್ತದೆ. ಶುಭದಿನ 30. ವಿಷ್ಣು ಸಹಸ್ರನಾಮ ಪಠಿಸಿರಿ.

---



**ಮಿಥುನ**

ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಈ ಅವಧಿಯಲ್ಲಿ ನೀವು ಹಾಕುವ ಶ್ರಮಕ್ಕೆ ಅದ್ಭುತವಾದ ಯಶಸ್ಸು ದೊರೆಯಲಿದೆ. ವಾರದ ಮಧ್ಯ ಭಾಗದಲ್ಲಿ ಭೂವ್ಯವಹಾರದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಭೂಮಿಗೆ ಸಂಬಂಧಿಸಿದ ಮುಖ್ಯ ವಿಷಯಗಳು ತಿಳಿದುಬರಲಿದೆ. ಶುಭದಿನ 01. ಹನುಮಾನ್ ಚಾಲೀಸ್ ಪಠಿಸಿರಿ.

---



**ಕಟಕ**

ವಾರದ ಶುರುವಿನಲ್ಲಿ ವೃತ್ತಿಯಲ್ಲಿ ಬಿಕ್ಕಟ್ಟು ಎದುರಾಗುತ್ತವೆ. ವಾರದ ಮಧ್ಯದ ಹೊತ್ತಿಗೆ ಆರೋಗ್ಯ ಚೇತರಿಸಿಕೊಳ್ಳುತ್ತದೆ. ಕೌಟುಂಬಿಕವಾಗಿ ಸಂತೋಷ ಸಮಾಧಾನ ಇರುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ವೈಯಕ್ತಿಕ ಸಂಬಂಧ ಮತ್ತು ಆರೋಗ್ಯ ಅತ್ಯುತ್ತಮವಾಗುತ್ತದೆ. ಪೋಷಕರ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕಾಗುತ್ತದೆ. ಶುಭದಿನ 03. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.


---



**ಸಿಂಹ**

ವಾರದ ಆರಂಭ ಬಹಳ ಸಂತೋಷವಾಗಿರುತ್ತದೆ. ಒಂದು ಕಡೆ ಆದಾಯ ಹೆಚ್ಚಿಸಿಕೊಳ್ಳುವುದಕ್ಕೆ ಉತ್ತಮ ಅವಕಾಶ. ನಿದ್ರೆಯ ವಿಚಾರದಲ್ಲಿ ತೊಂದರೆ ಎದುರಾಗಲಿದೆ. ಇದರಿಂದ ವಿಪರೀತ ಬೇಸರ ಆಗುತ್ತದೆ. ಈ ಅವಧಿಯಲ್ಲಿ ಆರೋಗ್ಯ ಕೈ ಕೊಡಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಬಾಕಿ ಉಳಿದ ಕೆಲಸಗಳನ್ನು ಪೂರೈಸುವತ್ತ ಗಮನ ಇರುತ್ತದೆ. ಶುಭದಿನ 02. ಸೌಂದರ್ಯಲಹರಿ ಪಠಿಸಿರಿ.

---



**ಕನ್ಯಾ**

ವ್ಯಾಪಾರಸ್ಥರು ಅದರ ಉನ್ನತಿಗೆ ಹೆಚ್ಚು ಶ್ರಮ ಹಾಕಲಿದ್ದೀರಿ. ಈ ಪ್ರಯತ್ನದಲ್ಲಿ ನಿಮಗೆ ಯಶಸ್ಸು ದೊರೆಯಲಿದೆ. ಈ ಅವಧಿಯಲ್ಲಿ ಆರೋಗ್ಯ ಉತ್ತಮವಾಗಿ ಇರುತ್ತದೆ. ಗ್ರಹಗತಿಗಳು ಶುಭ ದೃಷ್ಟಿ ಬೀರುವ ಸಮಯ ಇದು. ವಾರದ ಮಧ್ಯ ಭಾಗದಲ್ಲಿ ಆರೋಗ್ಯ ಅತ್ಯುತ್ತಮವಾಗಿರುತ್ತದೆ. ಉದ್ಯೋಗದ ಸನ್ನಿವೇಶವು ಈ ಹಿಂದಿನಂತೆಯೇ ಮುಂದುವರಿಯಲಿದೆ. ಶುಭದಿನ 04. ಗಣಪತಿಗೆ ದೂರ್ವಾರ್ಚನೆ ಮಾಡಿಸಿರಿ.

---



**ತುಲಾ**

ಈ ಅವಧಿಯಲ್ಲಿ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಾಧ್ಯತೆ ಇದೆ. ಆದರೆ ಉಸಿರಾಟದ ಸಮಸ್ಯೆ ಹಾಗೂ ಮಲಬದ್ಧತೆ ನಿಮ್ಮನ್ನು ಕಾಡಬಹುದು. ದೈನಂದಿನ ಕೆಲಸ ಕಾರ್ಯಗಳಲ್ಲಿ ಏರುಪೇರಾಗಬಹುದು. ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆಗಳಿವೆ. ವೈಯಕ್ತಿಕ ಸಂಬಂಧದಲ್ಲಿ ಪರಸ್ಪರ ವಿಶ್ವಾಸ ಹೆಚ್ಚಾಗುತ್ತದೆ. ಶುಭದಿನ 02. ನವಗ್ರಹ ಸ್ತೋತ್ರ ಪಠಿಸಿರಿ.


---



**ವೃಶ್ಚಿಕ**

ಸಾಮಾಜಿಕ ರಾಜಕೀಯ ಜೀವನದಲ್ಲಿ ನಿಮ್ಮ ಪ್ರಭಾವ ಅಷ್ಟಾಗಿ ಕೆಲಸಕ್ಕೆ ಬರುತ್ತಿಲ್ಲ ಎಂಬ ಆತಂಕ ಎದುರಾಗುತ್ತದೆ. ಇದರಿಂದ ಬಹಳ ಚಿಂತೆಗೆ ಒಳಗಾಗುತ್ತೀರಿ. ವೈಯಕ್ತಿಕ ಸಂಬಂಧದಲ್ಲಿ ಪರಸ್ಪರ ನಿಂದನೆಗಳನ್ನು ಮಾಡುವ ಸಾಧ್ಯತೆ ಇದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ತೊಡಗಿಸಿಕೊಳ್ಳುತ್ತೀರಿ. ಆರೋಗ್ಯ ಉತ್ತಮವಾಗಿ ಇರಲಿದೆ. ಶುಭದಿನ 01. ಶನಿ ಸ್ತೋತ್ರ ಪಠಣ ಮಾಡಿರಿ.

---



**ಧನಸ್ಸು**

ಸಾರ್ವಜನಿಕ ಸಂಪರ್ಕಕ್ಕೆ ಹೆಚ್ಚು ಶ್ರಮ ಹಾಕುತ್ತೀರಿ. ವ್ಯಾಪಾರ ಉದ್ಯಮ ನಡೆಸುತ್ತಿರುವವರು ಈಗ ನೀಡುತ್ತಿರುವ ಸೇವೆಗಳ ಜತೆಗೆ ಇನ್ನಷ್ಟು ಸೇರ್ಪಡೆ ಮಾಡಲಿದ್ದೀರಿ. ವೈವಾಹಿಕ ಜೀವನವು ಸಾಮಾನ್ಯವಾಗಿರುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ, ವೈಯಕ್ತಿಕ ವಿಚಾರಗಳಲ್ಲಿ ಸವಾಲುಗಳು ಎದುರಾಗುತ್ತವೆ. ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲಿದ್ದೀರಿ. ಶುಭದಿನ 29. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ

---



**ಮಕರ**

ವಾರದ ಆರಂಭದಲ್ಲಿ ವ್ಯಾಪಾರ ಉದ್ಯಮದ ಬಗ್ಗೆ ಹೆಚ್ಚು ಗಮನ ನೀಡಬೇಕಾಗುತ್ತದೆ. ನಿಮ್ಮಲ್ಲಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡುತ್ತೀರಿ. ಇನ್ನು ಉತ್ಪಾದನೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಣಕಾಸಿನ ಕೊರತೆ ಕಾಡಲಿದೆ. ವಾರದ ಮಧ್ಯ ಭಾಗದಲ್ಲಿ ಸಂಗಾತಿಯನ್ನು ಓಲೈಸಲು ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ಶುಭದಿನ. 30. ಶಿವಕವಚ ಪಠಣ ಮಾಡಿರಿ.

---



**ಕುಂಭ**

ವಾರದ ಶುರುವಿನಲ್ಲಿ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಭಾವನೆಗಳಿಗೆ ಗೌರವ ನೀಡುತ್ತೀರಿ. ಸಂಗಾತಿ ಜತೆಗೆ ಚರ್ಚಿಸಿ ಭೂಮಿ ಖರೀದಿ ಮಾಡುವ ಸಾಧ್ಯತೆಗಳಿವೆ. ಶುಭದಿನ. 03. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

---



**ಮೀನ**

ಮಾಡಿದ ಕೆಲಸಗಳನ್ನು ಪರಿಶೀಲನೆ ಮಾಡುವುದಕ್ಕೆ ಸಮಯ ನೀಡುತ್ತೀರಿ. ನೀವು ಖರ್ಚು ಮಾಡಿದ ಹಣಕ್ಕೆ ತಕ್ಕ ಪ್ರತಿಫಲ ಇಲ್ಲ ಎಂದು ಸ್ವಲ್ಪ ಮಟ್ಟಿಗೆ ಬೇಸರ ಆಗುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ವೈಯಕ್ತಿಕ ಹಾಗೂ ಕೌಟುಂಬಿಕ ಜೀವನ ಸುಖವಾಗಿ ಇರುತ್ತದೆ. ಹಣಕಾಸಿನ ಹರಿವು ಉತ್ತಮವಾಗಿ ಇರಲಿದೆ. ಮದುವೆ ಜವಾಬ್ದಾರಿಯನ್ನು ನಿರ್ವಹಿಸಲಿದ್ದೀರಿ. ಶುಭದಿನ 03. ಚಂಡಿ ಪಾರಾಯಣ ಮಾಡಿರಿ.